ಏನಿರಬಹುದೆಂದು ಸುಮಾರು ಹೊತ್ತು ತಿರುಗಿಸಿ ಮುರುಗಿಸಿ, 'ಮೂರ್ ಸಾವಿರ ಮೇಲ್ ಬರೋರ್ವರ್ಗೂ ಇವನೇನ್ ಅಂಟಾರ್ಟಿಕಾದಲಿ ಹೈಬರ್‌ನೇಟ್ ಆಗಿದ್ನಾ? ವಾಟ್ ಎ ಬುಲ್ಶಿಟ್! ಎಲ್ರೂ ಮಹಾ ಸಾಚ ಮತ್ತು ಸಭ್ಯಸ್ತರೇ! ಇವ್ರ ಮನೆ ಹಾಳಾಗ!...' ಟೀವಿ ಆಫ್ ಮಾಡಿ ರಿಮೋಟ್ ಎಸೆದ. ಅದು ಹೋಗಿ ಟಿವಿ ಕೆಳಗಿನ ಸ್ಟಾಂಡಡಿ ಬಿತ್ತು.

'ಈ ದೇಶದ ಅಂಡಿಗೇ ಪೈಲ್ಸ್ ಬಡಿದಿದೆ. ಎಲ್ಲರ ಅಂಡಲ್ಲೂ ಒಂದೊಂದು ಬೇರು ಮೊಳೆತು ಎಲ್ಲರೂ ತಳವೂರುವವರೇ!...' ಗೊಣಗಿಕೊಂಡವನೇ ಗಾಬರಿಗೊಂಡ. ಮೂರು ದಿನಗಳಿಂದ ತನಗೆ ಪಾಟಿಯೇ ಆಗಿಲ್ಲ! ತನ್ನ ಅಂಡಿನಲ್ಲೂ ಯಾವುದಾದರೂ ಮೂಲವ್ಯಾಧಿಯ ಬೇರು ಅರಳುತ್ತಿದೆಯೇ? ದಾಸವಾಳದ ಕೊಂಬೆ ಚಿಗುರೊಡೆದ ಹಾಗೆ, ಕತ್ತರಿಸಿ ತಂದು ಪಾಟಿನಲ್ಲಿಟ್ಟ ಗುಲಾಬಿ ಟೊಂಗೆಯೊಂದು ಟಂಗೆಂದು ಹೂ ಮುಡಿದು ನಿಂತ ಹಾಗೆ, ತನ್ನ ಅಡಿಯಿಂದಲೂ ಪುರಾತನ ಬೇರೊಂದು ಪುಸಕ್ಕನೆ ನುಸುಳಿ ಹೊರ ಬಂದು..

ಪುರು ಪಳಕ್ಕನೆ ಎದ್ದು ಫ್ರಿಡ್ಜ್ ತೆರೆದು ಅದರೊಳ ಕಂಪಾರ್ಟ್‌ಮೆಂಟಿನಲ್ಲಿ ಸುಜಾತಾ ತಂದಿಟ್ಟುಕೊಂಡಿದ್ದ ಇಸಬ್‌ಗೋಲ್ ಪ್ಯಾಕೆಟಿನಿಂದ ಮೂರು ಚಮಚ ಪುಡಿಯನ್ನು ನೀರಿಗೆ ಹಾಕಿಕೊಂಡು ಚೆನ್ನಾಗಿ ಕದಡಿ ಗಟಗಟ ಕುಡಿದ. ಎಲ್ಲಿತ್ತೋ ಬೆಕ್ಕು? ಪುಳುಕ್ಕನೆ ಒಳ ಬಂದು ಅವನ ಕಾಲಿಗೆ ಜೋತು ಬಿದ್ದಿತು. ಅದಕ್ಕೂ ಪಾಟಿಯಾಗಿಲ್ಲವೇನೋ, ಪಾಪ ಎಂದುಕೊಂಡು ಮತ್ತಷ್ಟು ಇಸಬ್‌ಗೋಲ್ ಕದಡಿ ಅದರ ಬೋಗುಣಿಗೆ ಸುರಿದ. ಏನಾಶ್ಚರ್ಯ! ಅದು ಚಪ್ಪರಿಸಿಕೊಂಡು ಕುಡಿದು, ಖಾಲಿ ಬೋಗುಣಿಯನ್ನು ನೆಕ್ಕ ತೊಡಗಿತು.

ಸ್ಟ್ಯಾಂಡಡಿ ಬಿದ್ದ ರಿಮೋಟನ್ನು ಬಗ್ಗಿ ತೆಗೆಯುವಾಗ ಅಡುಗೆ ಮನೆ ಮೂಲೆಯಲ್ಲಿ ಬೋಗುಣಿ ಮುಂದೆ ಇನ್ನೂ ಕುಳಿತಿರುವ ಬೆಕ್ಕು ತನ್ನನ್ನೇ ಎವೆಯಿಕ್ಕದೆ ನಿಟ್ಟಿಸುತ್ತಿರುವುದು ಕಾಣಿಸಿತು. ತನ್ನ ಪ್ರತಿ ಚಲನವಲನ ಗಮನಿಸುತ್ತಾ ಸುಜಾತಾ ಮಾಡುತ್ತಿದ್ದ ಕೆಲಸವನ್ನು ಇದೀಗ ಈ ಬೆಕ್ಕು ಮಾಡುತ್ತಿದೆಯೆ? ಸಣ್ಣ ಗುಮಾನಿಯೊಂದು ಹುಟ್ಟಿಕೊಂಡು ಕಣ್ಣು ಕಿರಿದುಕೊಳಿಸಿ ಬೆಕ್ಕನ್ನೇ ನಿರುಕಿಸಿದ. ಎಷ್ಟೆಂದರೂ ಅವಳ ಬೆಕ್ಕಲ್ಲವೇ? ನಾಪತ್ತೆಯಾಗುವ ಮುಂಚೆ ಬೆಕ್ಕಿಗೆ ವಾರ್ನ್ ಮಾಡಿ ಹೋಗಿರಬಹುದೆ?

ಸ್ಟ್ಯಾಂಡಡಿ ಚಾರ್ಜರೂ ಬಿದ್ದಿತ್ತು. ಮೊಬೈಲ್ ಚಾರ್ಜರ್‌ಗೆ ಹಾಕಿ ಬೆಕ್ಕನ್ನು ಕಾಲಿನಿಂದ ಜಾಡಿಸಿದ. ಜೋರಾಗೊಮ್ಮೆ ಮೀಂಯ್‌ಗುಟ್ಟಿ ಅದು ಬೆಡ್ ರೂಮಿನತ್ತ ಓಡಿ ಹೋಯಿತು. ವಿಚಿತ್ರ ಖುಷಿಯಿಂದ ದಡಬಡಿಸಿ ಎದ್ದವನೇ ರೂಮಿಗೆ ಹೋಗಿ ಬಾಗಿಲ ಸಂಧಿ ಮುದುರಿ ಕುಳಿತ ಅದನ್ನು ಮತ್ತೊಮ್ಮೆ ಬಲವಾಗಿ ಜಾಡಿಸಿದ. ಈ ಬಾರಿ ಅದೂ ಜೋರಾಗಿ ಮೀಂಕರಿಸುತ್ತಾ ಅವನನ್ನು ಎದುರಿಸುವಂತೆ ಸಟ್ಟನೆ ಎದ್ದು ನಿಂತಿತು. ಕೋಪದಿಂದ ಅದರ ಕಣ್ಣು ಇನ್ನಷ್ಟು ಹಸಿರಿನಿಂದ ಮಿರ ಮಿರ ಮಿಂಚುತಿತ್ತು; ಬಾಲ ಸೆಟೆದು ನಿಂತಿತು; ಮೈಯ ಒಂದೊಂದು ರೋಮವೂ ನಿಮಿರಿ ಸಿಟ್ಟಿನಿಂದ ಕಂಪಿಸುತ್ತಾ ಅವನನ್ನು ತಿಂದು ಹಾಕುವಂತೆ ನಿಟ್ಟಿಸುತ್ತಾ ಚಂಗನೆ ಅವನ ಮೇಲೆ ಹಾರಿತು. ಅದನ್ನು ಅವನು ನಿರೀಕ್ಷಿಸಿರಲಿಲ್ಲ. ಆಹಾ, ಅನಿರೀಕ್ಷಿತವೇ!

ಅವನು ಪಕ್ಕನೇ ಮಂಚದ ಮೇಲೆ ಹಾರಿ ದಿಂಬನ್ನೆತ್ತಿ ಅದರ ಮೇಲೆ ಎಸೆದ. ಸಟ್ಟನೇ ವಿಕಾರವಾಗಿ ಅರಚಿಕೊಳ್ಳುತ್ತಾ ಅದು ಹಾಲಿಗೆ ಓಡಿದ್ದೇ ಅವನು ಬಾಗಿಲು ಜಡಿದು ಧೊಪ್ಪನೆ ಹಾಸಿಗೆ ಮೇಲೆ ಉರುಳಿದ. ಹೊಟ್ಟೆಯಿಂದೇನೋ ಉಮ್ಮಳಿಸಿ ಬಂದಂತಾಯಿತು.

ನೋಡಿದರೆ ಮುಖವೆಲ್ಲಾ ನೀರು! ಗಾಜಿನಾಚೆಯಷ್ಟೇ ಮಳೆ ಬರುತ್ತಿರಲಿಲ್ಲ. ಅವನೊಳಗೂ ಭೋರ್ಗರೆಯುತ್ತಿರುವ ಕರಾವಳಿ ಸಮುದ್ರದ ತುಂಡು. ಒತ್ತರಿಸಿಕೊಂಡು ಬರುತ್ತಿರುವ ಅಲೆಯ